**ಬೆಟ್ಟದ ಮೇಲೊಂದು ಮನೆಯ ಮಾಡಿ**
**ಮೃಗಗಳಿಗಂಜಿದಡೆಂತಯ್ಯಾ?**
**ಸಮುದ್ರದ ತಡಿಯಲೊಂದು ಮನೆಯ ಮಾಡಿ**
**ನೊರೆತೆರೆಗಳಿಗಂಜಿದಡೆಂತಯ್ಯಾ?**
**ಸಂತೆಯೊಳಗೊಂದು ಮನೆಯ ಮಾಡಿ**
**ಶಬ್ದಕ್ಕೆ ನಾಚಿದಡೆಂತಯ್ಯಾ?**
**ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ,**
**ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು**
**ಬಂದಡೆ**
**ಮನದಲ್ಲಿ ಕೋಪವ ತಾಳದೆ**
**ಸಮಾಧಾನಿಯಾಗಿರಬೇಕು.**

ಎಂಬ ಅಕ್ಕನ ವಚನದಂತೆ ನಾನು ಮುಂಜಾನೆದ್ದು ಕಣ್ಣುಬಿಟ್ಟಾಗ ನನಗೆ ದಿನವೂ ಕಾಣಿಸುವುದು ನನ್ನ ಮನೆಯ ಮುಂಭಾಗ ಇರುವ ಸಂತೆಮಾಳ. ನಮ್ಮ ಮನೆಗೂ ಸಂತೆಗೂ ಏನೇನೂ ಅಂತರವಿಲ್ಲ. ಅಷ್ಟು ನಿಕಟವೂ, ಅಷ್ಟು ಹತ್ತಿರವೂ ಇರುವ ಸಂತೆಯನ್ನು ನೋಡಿ ಅದರ ಬಗ್ಗೆ ಒಂದಿಷ್ಟು ಪರಿಚಯಿಸಿ, ಒಂದಿಷ್ಟು ಹೊತ್ತು ನಿಮ್ಮನ್ನು ಸಂತೆಯೊಳಗೆ ತಿರುಗಾಡಿಸಲು ಪ್ರಯತ್ನಿಸೋಣ ಎಂದುಕೊಂಡಿದ್ದೇನೆ. ಹೆಚ್ಚಿನ ಕಡೆಗಳಲ್ಲಿ ಸಂತೆ ಇಲ್ಲದ ಈ ಕಾಲಘಟ್ಟದಲ್ಲಿ ನಮ್ಮ ಸಂತೆಗಳಿಗೂ, ಸಂತೆ ನಡೆಯುವ ದಿನಕ್ಕೂ, ಸಂತೆ ಜರುಗುವ ಊರುಗಳಿಗೂ ಬಿಡಿಸಲಾರದ ನಂಟಿದೆ. ನಮ್ಮೂರು ತಾಲ್ಲೂಕು ಕೇಂದ್ರವಾದ ಸೋಮವಾರ ಪೇಟೆ. ಸೋಮವಾರಪೇಟೆಯಲ್ಲಿ ಪೇಟೆ ಅಥವಾ ಸಂತೆ ಜರುಗುವುದು ಸೋಮವಾರದ ದಿನ. ಶನಿವಾರ ಜರುಗುವ ಸಂತೆಯ ಕಾರಣಕ್ಕಾಗಿ 'ಶನಿವಾರಸಂತೆ' ಎಂಬ ಹೆಸರು ಆ ಊರನ್ನು ಅಪ್ಪಿಕೊಂಡಿದೆ. ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ 'ಶುಕ್ರವಾರಸಂತೆ' ಎಂಬ ಊರಿದೆ. ದಾವಣಗೆರೆ ಜಿಲ್ಲೆಯಲ್ಲಿ 'ಸಂತೆಬೆನ್ನೂರು', 'ಸಂತೆಮಾರೂರು', 'ಸಂತೆಬಾಚಳ್ಳಿ', 'ಸಂತೆ ಬೆನ್ನೂರು', 'ಬಾರೆಸಂತೆ' ಇತ್ಯಾದಿಗಳಿವೆ.

ಎಲ್ಲರಿಗೂ ಗೊತ್ತಿರುವಂತೆ ಸಂತೆಯು ವಾರದಲ್ಲಿ ಒಮ್ಮೆ ನಡೆಯುವ ನಮ್ಮ ಹಿರೀಕರ ಪರಂಪರಾಗತ ವ್ಯಾಪಾರಿ ಕೇಂದ್ರ. ಇಲ್ಲಿ ಬೃಹತ್ ಮಟ್ಟದ ವ್ಯಾಪಾರಗಳು ನಡೆಯದಿದ್ದರೂ ಸುತ್ತಮುತ್ತಲಿನ ಐದಾರು ಕಿಲೋ ಮೀಟರ್ ವ್ಯಾಪ್ತಿಯಲ್ಲಿಯೋ, ಐದೋ, ಆರೋ ಹಳ್ಳಿಗಳು ಒಂದು ಪ್ರದೇಶವನ್ನು ಕೇಂದ್ರವಾಗಿಸಿಕೊಂಡು ವ್ಯಾಪಾರ ನಡೆಸುವ ಪ್ರಕ್ರಿಯೆ ಇದಾಗಿದೆ. ಆರಂಭದಲ್ಲಿ ಬಾರ್ಟರ್ ಸಿಸ್ಟಮ್ ಅಂದರೆ ವಸ್ತುಗಳ ವಿನಿಮಯದಿಂದ ಆರಂಭವಾದ ಈ ಪ್ರಕ್ರಿಯೆ ಮುಂದೆ ಆರ್ಥಿಕ ನೆಲೆಯಲ್ಲಿಯೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು.

ಕುಲಕಸುಬಿನ, ವೃತ್ತಿ ಆಧಾರಿತ ಕುಂಬಾರರು, ಕಮ್ಮಾರರು, ಚಮ್ಮಾರರು, ಕಲಾಯಿ ಹಾಕುವವರು, ನಾಟಿವೈದ್ಯರು ಸಂತೆಯಲ್ಲಿ ಬಹುವಾಗಿ ಕಾಣಿಸಿಕೊಂಡರು. ಇಲ್ಲಿ ವ್ಯಾಪಾರಕ್ಕೆ ಬರುವ ವ್ಯಾಪಾರಿಗಳಲ್ಲಿ ಹೆಚ್ಚಿನವರು ಪರ ಊರಿನವರು. ವಾರಪೂರ್ತಿ ಊರೂರು ಸಂತೆಗಳನ್ನು ಸುತ್ತಿ ವ್ಯಾಪಾರ ಮಾಡುವವರಾಗಿದ್ದಾರೆ. ಸಂತೆ ವ್ಯಾಪಾರಸ್ಥರು ಗುಂಪು ಗುಂಪಾಗಿ ಆರಂಭದಲ್ಲಿ ಎತ್ತಿನಗಾಡಿ, ಕತ್ತೆಗಳ ಮೂಲಕ ತಮ್ಮ ಸಾಮಾನು ಸರಂಜಾಮುಗಳನ್ನು ಸಾಗಿಸುವ ಪ್ರಕ್ರಿಯೆಯನ್ನು ಕಾಣಬಹುದಾಗಿತ್ತು. ಕಳ್ಳಕಾಕರು ಇಂತಹ ವ್ಯಾಪಾರಸ್ಥರನ್ನು ದಾರಿಮಧ್ಯೆ ದರೋಡೆ ಮಾಡಿ ದೋಚಿ, ಕೊಂದು ಹಾಕುತ್ತಿದ್ದರು. ಇದಕ್ಕಾಗಿಯೇ ವ್ಯಾಪಾರಸ್ಥರು ಗುಂಪುಗುಂಪಾಗಿ

